# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:09/2014-15

ದಿನಾಂಕ:19.07.2016.

ಉಪಸ್ಥಿತರು: ಡಾ.ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ
ಸಹಾಯಕ ಆಯುಕ್ತರು, ಹೊಸಪೇಟೆ

******

**ವಾದಿಗಳು: ಶ್ರೀ/ ಶ್ರೀಮತಿ**

1. ಜೈರಾಬಿ ಗಂಡ ಮರ್ದಾನ್ ಸಾಬ್,
ವಾಸ: 4ನೇ ವಾರ್ಡ್, ಕಮಲಾಪುರ ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

[ಶ್ರೀ ಕೆ.ಸಿ.ಶರಣಪ್ಪ, ವಕೀಲರು, ಹೊಸಪೇಟೆ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಮೈನುದ್ದೀನ್ ತಂದೆ ಬಡೇಸಾಬ್,
ವಾಸ: ನಿರ್ಮಿತಿ ಕೇಂದ್ರ, 3ನೇ ವಾರ್ಡ್, ಹಜರತ್ ಪಟೇಲ್ ಕಾಲೋನಿ, ಕೊಪ್ಪಳ ತಾ& ಜಿಲ್ಲೆ.
2. ಉಸ್ಮಾನ್ ಸಾಬ್ ತಂದೆ ಬಡೇಸಾಬ್,
ವಾಸ: ನಾಯಕರ ಓಣಿ, 16ನೇ ವಾರ್ಡ್, ಮೌಲಾನಿ ಮಸೀದ್, ಕುಷ್ಟಗಿ, ಕೊಪ್ಪಳ ಜಿಲ್ಲೆ.
3. ಜೈಬುನಾ ಗಂಡ ಲೇಟ್ ಪಾಷ
ವಾಸ: ಹಮ್ಲಾರ್ ಕಾಲೋನಿ, 3ನೇ ವಾರ್ಡ್, ಸ.ಫ್ರೌ.ಶಾಲೆ ಹತ್ತಿರ, ಕೊಪ್ಪಳ ತಾ& ಜಿಲ್ಲೆ.
4. ತಹಶೀಲ್ದಾರರು, ಹೊಸಪೇಟೆ.

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಮಲಾಪುರ | ಕಮಲಾಪುರ | 52 | 05 ಎಕರೆ 76 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಕಮಲಾಪುರ ಗ್ರಾಮದ ಸ.ನಂ.52 ವಿಸ್ತೀರ್ಣ:05 ಎಕರೆ 76 ಸೆಂಟ್ಸ್, ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಮಲಾಪುರ ಇವರ ಆದೇಶ ಸಂಖ್ಯೆ:51/06-07 ದಿನಾಂಕ:31.09.2006 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಅಪೀಲನ್ನು ಸಲ್ಲಿಸಿರುತ್ತಾರೆ ಮತ್ತು ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ದಿನಾಂಕ:22.04.2014 ರಂದು ಅಪೀಲುದಾರರ ಪರ ವಕೀಲರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:10.06.2014 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಾದಿಪರ ವಕೀಲರು ದಿನಾಂಕ:05.07.2016 ರಂದು ಸದರಿ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಒತ್ತಾಯಿಸದೇ ಇರುವ ಮೆಮೋವನ್ನು ದಾಖಲಿಸುತ್ತಾ, ಪ್ರಕರಣವನ್ನು ಇದೇ ಹಂತದಲ್ಲಿ ವಜಾಗೊಳಿಸಲು ಕೋರಿರುತ್ತಾರೆ. ಆದುದರಿಂದ, ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ವಾದಿಪರ ವಕೀಲರು ಸದರಿ ಪಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿ ಮನವಿ ಸಲ್ಲಿಸಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:19.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಡಾ.ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ

ವಾದಿ: ಪ್ರತಿವಾದಿಗಳಿಗೆ

**ಪ್ರತಿಯನ್ನು:-** ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.